ಶ್ರೀ ಪಿ. ಎನ್. ಪಾಟೀಲ್.—ಡಿಸ್ಟ್ರಿಕ್ಟ್ ಪೆಪಿಟರಿಂಗೆ ನಾನೇ ಅಧ್ಯಕ್ಷನಾಗಿದ್ದೆ. ಅಲ್ಲಿ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಬಂದು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ನಿರುದ್ಯೋಗಿ ಜನರಿವ್ಯಾರೆ ಎಷ್ಟೋ ಜನ ಟೆಕ್ನೀಷಿಯನ್ಸ್ ಇದ್ದಾರೆ. ಅವರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಿಲ್ಲದೆ ಇದೆ. ಪರಕೀಯರು, ಪರದೇಶದವರು ಬಂದು ನಮ್ಮಲ್ಲಿ ಯಾವ ಟೆಕ್ನಿಕಲ್ ಅಸಿಸ್ಟೆನ್ಸ್ ಸಹ ಕೊಡುವುದಕ್ಕೆ ಸಾಧ್ಯವಿಲ್ಲ. ವಿಯಟ್ನಾಂನಲ್ಲಿ ಕೋಟ್ಯಾಂತರ ಜನರ ರಕ್ತವನ್ನು ಹರಿಸುತ್ತಿದ್ದಾರೆ; ಅಲ್ಲಿ ವಾರ್ ನ್ಲೋಗಾನ್ ಹೇಳುತ್ತ ಇಲ್ಲಿ ಪೀನ್ ಕೋರ್ ವಾಲಂಟೀರ್ಸ್ ಎಂದು ಕಳಿಸಿದ್ದಾರೆ ಮುಂತಾಗಿ ನಿರ್ಣಯ ಮಾಡಿ ಕಳಿಸಲಾಗಿದೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಮೂರು ನಾಲ್ಕು ಪ್ರಶ್ನೆಗಳನ್ನು ಕೂಡಿ ಕೇಳಿದ್ದಾರೆ. ಉದರೆಯಲ್ಲಿ ವಾಲಂಟೀರ್ ಕೋರ್ ಇದೆ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಆದಂಥ ತೀರ್ಮಾನದ ಪ್ರಕಾರ ಮಾಡಿದ್ದೇವೆ.

American Peace Corps

480. Sri SADASHIVAPPA PATIL (Deodurg).—

Will the Minister for Development be pleased to state :—

(*a*) the number of American Peace Corps Volunteers in Mysore State ;

(*b*) the work done by Peace Corps Volunteers ;

Sri P. M. NADGOUDA (Minister for Development).—

(*a*) 61. Details as per list appended.

(*b*) As explained in the note placed on the Table of the House.

LIST OF VOLUNTEERS

No. of Volunteers	Department to which they are allotted	Arrival	Period of assignment
16	Animal Husbandry Department (Poultry Section).	September 1968.	September 1970
1	Agriculture ...	October 1966	August 1969 *
13	Agriculture ...	October 1968	December 1970
10	Agriculture ...	December 1968.	January 1971
18	Horticulture Department.	December 1968.	January 1971
3	Secretaries ...	December 1967.	December 1969
		June 1968	June 1970
16			

*Extension in the period of stay is being granted until March 1970.

Sri J. P. SARWESH.—Will the State Government write to the Government of India to find out through an independent agency whether these American Peace Corps Volunteers are really technically qualified persons or people who are unemployed in America who are packed to India ?

† Sri P. M. NADGOUDA.—This question does not arise, since the State Government has already taken a decision that further indents for these volunteers may not be made.

Sri V. N. PATIL.—I would like to know why you have provided accommodation to these volunteers in the Block Development offices and school buildings ?

Sri P. M. NADGOUDA.—There is no other accommodation available and hence we have provided them accommodation in the Block Development offices and School buildings.

1-30 P. M.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಸ್ವಯಂಸೇವಕರು ಅವರ ಸಂಸ್ಕೃತಿಯನ್ನು ನಮ್ಮಲ್ಲಿ ಬೀರಿ ಸಾಧ್ಯವಿರುವಷ್ಟು ನಮ್ಮ ದೇಶದ ಸಮಾಚಾರವನ್ನು ತಮ್ಮ ದೇಶಕ್ಕೆ ತಿಳಿಸಲು ಇಲ್ಲದ್ದಾರೆಂದು ತಿಳಿದುಬಂದಿದೆ. ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಮುಂದಕ್ಕೆ ಈ ಸ್ವಯಂಸೇವಕರನ್ನು ತೆಗೆದುಕೊಳ್ಳಬಾರ ದೆಂದಿದ್ದೇವೆ. ಸಂಸ್ಕೃತಿಯ ವಿಚಾರದಲ್ಲಿ ಅವರು ಹೇಳುವುದು ಅಷ್ಟು ಸಮಂಜಸವಾಗಿಲ್ಲ. It is an insult to teach culture to a poor man.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಇವರನ್ನು ತೆಗೆದುಕೊಳ್ಳರೇಬ್ಬೇಕೆಂದು ಕೇಂದ್ರ ಸರಕಾರ ಒತ್ತಾಯಮಾಡಿದೆಯೇ ? ಇವರು ಸಂಸ್ಥಾನದಲ್ಲಿ ಮಾಡಿರುವ ಕೆಲಸವೇನು ?

ಶ್ರೀ ಪಿ. ಎಂ. ನಾಡಗೌಡ.—ತಾಂತ್ರಿಕ ದೃಷ್ಟಿಯಿಂದ ಅವನ್ನು ತೆಗೆದುಕೊಳ್ಳರಾಗಿದೆ. ಪ್ಲಾನಿನಲ್ಲಿ ಚೆಕ್ನಿಕಲ್ ನೋ ಹೌ ಕೊಡುವ ಒಂದು ಅಗ್ರಿಮೆಂಟ್ ಇದೆ. ಅದಕ್ಕನುಗುಣವಾಗಿ ರಾಜ್ಯ ಸರಕಾರ ತೆಗೆದುಕೊಂಡಿದೆ. ಮುಂದೆ ಈ ಪ್ರಶ್ನೆ ಬರುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಅಮೇರಿಕ ಅಲ್ಲದೆ ಉಳಿದ ದೇಶದ ಜನರು ಇವರಲ್ಲಿ ಯಾರಾದರೂ ಇರುವರೇ ?

ಶ್ರೀ ಪಿ. ಎಂ. ನಾಡಗೌಡ.—ಇದ್ದಾರೆ, ಜರ್ಮನಿ ದೇಶದವರೂ ಇದ್ದಾರೆ.

Sri M. S. KRISHNAN.—Are you aware that on a report of the Government of India, it has been found that most of these Peace Corps members are agents of the C. I. A. of America and hence a recommendation has been made that not only should they not be got in but they should be sent away and in accordance with that recommendation the West Bengal and Kerala Governments have already taken a decision ? Will you please take a decision in the same direction ?

Sri P. M. NADGOUDA.—I am not aware of such a recommendation.

ಶ್ರೀ ಬೋಳ ರಘುರಾಮಶೆಟ್ಟಿ.—ಅಮೇರಿಕ ಮಿತ್ರತರ ದೇಶಗಳು ನಮಗೆ ಸಹಾಯ ಮಾಡುವುದರಿಂದ ಸ್ವಯಂಸೇವಕರು ಕೆಲಸಮಾಡುವರು. ಅದರಿಂದ ಸರಕಾರಕ್ಕೆ ಸಹಾಯವಾಗಿ ದೆಯೋ ಅಥವಾ ನಷ್ಟವಾಗಿದೆಯೋ ?

ಶ್ರೀ ಪಿ. ಎಂ. ನಾಡಗೌಡ.—ಸಹಾಯವಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ಸ್ವಯಂಸೇವಕರು ಕೆಲಸಮಾಡುವುದು ಕೇಂದ್ರ ಸರಕಾರದ ಪಾಲಸಿ ಪ್ರಕಾರವೋ ಅಥವಾ ರಾಜ್ಯ ಸರಕಾರದ ಪಾಲಸಿ ಪ್ರಕಾರವೊ ?

ಶ್ರೀ ಪಿ. ಎಂ. ನಾಡಗೌಡ.—ಕೇಂದ್ರ ಸರಕಾರದ ಪಾಲಸಿ ಪ್ರಕಾರ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಸ್ವಯಂಸೇವಕರ ಬಗ್ಗೆ ನಮ್ಮ ದೇಶದಲ್ಲಿ ಬಹಳ ಬುದ್ಧಿವಂತರಿರ್ತಾ ಅನುಮಾನ ವ್ಯಕ್ತಪಡಿಸಿದ್ದಾರೆ, ಅವರು ಬರೀ ಶಾಂತಿ ಕೆಲಸ ಮಾಡುತ್ತಿಲ್ಲ, ರಾಜಕೀಯ ಕೂಡ ಮಾಡುತ್ತಾ ಇದ್ದಾರೆ ಎಂಬ ಅನುಮಾನವಿರುವುದರಿಂದ, ಅವರಿಲ್ಲದೆ ನಮ್ಮ ದೇಶದಲ್ಲಿ ಹಾರ್ಟಿಕಲ್ಚರರ್, ಅಗ್ರಿಕಲ್ಚರರ್ ಡಿಪಾರ್ಟ್‌ಮೆಂಟುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ತಮ್ಮ ಅಭಿಪ್ರಾಯವೇ ? ಅಥವಾ ಅವರು ಬೇಕಾಗಿಲ್ಲ ಎಂದು ಹೇಳುವುದಕ್ಕೆ ತಮಗೆ ಏನು ಕಷ್ಟ ?

ಶ್ರೀ ಪಿ. ಎಂ. ನಾಡಗೌಡ.—ಬೇಕಾಗಿಲ್ಲ ಎಂದು ಹೇಳಿಬಿಟ್ಟಿದ್ದೇವೆ. ಮೊದಲನ ಅಗ್ರಿಮೆಂಟ್ ಪ್ರಕಾರ ತೆಗೆದುಕೊಳ್ಳಬೇಕಾಗಿತ್ತು. ಮುಂದೆ ಕರೆಸಬೇಕಾಗಿಲ್ಲ ಎಂದು ಹೇಳಿದ್ದೇವೆ.

Sri A. R. PANCHAGAVI.—Is Government aware that wherever these Peace Corps volunteers are posted there is a fresh outlook regarding contour irrigation bunding and mechanised cultivation ?

Sri P. M. NADGOUDA.—Yes, Sir.

ಶ್ರೀ ಎಂ. ನಾಗಪ್ಪ.—ಈ ವಾಲಂಟಿಯರುಗಳಿಗೆ ಕನ್ನಡ ಭಾಷೆ ಬರದೇ ಇದ್ದು ಅವರಿಂದ ಹಳ್ಳಿಯ ಜನತೆಗೆ ಯಾವ ವಿಧವಾದ ಪ್ರಯೋಜನವೂ ಆಗಿಲ್ಲ, ತಾವು ಯಾವ ಉದ್ದೇಶದಿಂದ ಅವರನ್ನು ಕರೆಸಿದ್ದಿರೋ ಅದು ಸಾಧಿತವಾಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಅವರು ಬೇಡ ಅಂತ ಹೇಳುತ್ತೀರಾ ? ಎರಡನೆಯದಾಗಿ ಮೈಸೂರು ರಾಜ್ಯದಲ್ಲೆ ಹೆಚ್ಚಾಗಿ ಇವರನ್ನು ತೆಗೆದುಕೊಂಡಿದ್ದೀರಂತೆ, ಇದರ ಬಗ್ಗೆ ಏನು ನೀತಿ ಇಟ್ಟುಕೊಂಡಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಅವರನ್ನು ಇಂಡೆಂಟ್ ಮಾಡುವ ಮುಂಚೆ ಯಾವರಾಜ್ಯ ಸರ್ಕಾರದವರು ಅವರನ್ನು ತೆಗೆದುಕೊಳ್ಳುತ್ತಾರೆ, ಅವರ ಪ್ರತಿನಿಧಿಗಳು, ಅಧಿಕಾರಿಗಳು ಆ ದೇಶಗಳಿಗೆ ಹೋಗಿ ಅವರಿಗೆ ಆಯಾ ಭಾಷೆಯನ್ನು ಕಲಿಸಿ ನಂತರ ತೆಗೆದುಕೊಳ್ಳುತ್ತಾ ಇದ್ದಾರೆ. ಅದ್ದರಿಂದ ಅವರಿಗೆ ಕನ್ನಡ ಬರುತ್ತದೆ, ನಮಗಿಂತ ಚೆನ್ನಾಗಿ ಮಾತನಾಡ ತ್ತಾರೆ ಎಂದು ಹೇಳುತ್ತೇನೆ.

Sri B. P. KADAM.—Is it not a fact that there are specific allegations that these Peace Corps volunteers do not teach peace but they preach hatred ?

Sri P. M. NADGOUDA.—Government is not aware of the fact. If any such instance is brought to our notice Government will see that necessary action is taken against such volunteers.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಚಿವರು ಈ ವಾಲಂಟಿಯರುಗಳಿಂದ ಸರ್ಕಾರಕ್ಕೆ ಲಾಭವಾಗಿದೆ ಎಂದು ಅನ್ನುವ ಮಾತನ್ನು ಹೇಳಿದರೂ ಸಹ ಈಗ ಅದನ್ನು ಬಂದ್ ಮಾಡಿದ್ದೇವೆ ಅಂತ ಹೇಳಿದರು. ಈ ವಾಲಂಟಿಯರುಗಳಿಗೆ ಹೆದರಿ ಬೇಡ ಅಂತ ಬಂದ್ ಮಾಡಿದಿರಾ ಅಥವಾ ಬೇರೆ ರೀತಿಯಿಂದ ಏನಾದರೂ ಒಳಲಾಭ ದೊರಕಿ ಬಂದ್ ಮಾಡಿದರಾ ? ಏಕೆಂದರೆ ಉತ್ತಮ ರೀತಿಯಿಂದ ಕೆಲಸ ಮಾಡುತ್ತಾರೆ ಎಂಬ ಅಭಿಪ್ರಾಯ ಇದ್ದರೂ ಸಹ ಈ ರೀತಿಯ ಧೋರಣೆಯನ್ನು ವಹಿಸಿ ರಾಜ್ಯಕ್ಕೆ ಮತ್ತು ರಾಜ್ಯದ ಜನತೆಗೆ ಲುಕ್ಸಾನು ಮಾಡುತ್ತಿದ್ದೀರಿ ಎಂಬ ಮಾತನ್ನು ಒಪ್ಪುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಅಗ್ರಿಮೆಂಟ್ ಏನಿದೆ ಅದು ಮುಗಿಯಿತು ಅದಕ್ಕೆ ಬಂದ್ ಮಾಡಿದ್ದೇವೆ.

Sri B. B. SAYANAK.—When there is a Shanti Sena of Vinoba Bhave, what is the use of this Peace Corps ?

(No answer)

ಶ್ರೀ ವಾಟಾಳ್ ನಾಗರಾಜ್.—ಈ ಶಾಂತಿದಳದವರು ನಮ್ಮ ದೇಶದಲ್ಲಿ ಬಂದು ಅನೇಕರನ್ನು ಮತಾಂತರ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇಲ್ಲ.

Major and Medium Irrigation Projects to be taken up under IV Five Year Plan

370. Sri P. VENKATAGIRIYAPPA (Kolar).—Will the Chief Minister be pleased to state :—

(*a*) the major and medium Irrigation Projects that are to be taken up in the Fourth five Year Plan and the estimated amounts to be incurred on each of the projects ;

(*b*) the ways and means of the Government to mobilise necessary resources with a view to complete the project within the Fourth Five Year Plan ;

(*c*) whether there is any proposal before Government to get foriegn assistance to any specific Project ?

Sri VEERENDRA PATIL (Chief Minister).—

(*a*) *Vide* Statement appended.

(*b*) A committee has been set up to examine this.

(*c*) Yes.